ನಿಲುವಳಿ ಸೂಚನೆಯ ವ್ಯಾಪ್ತಿಗೆ ಬರುವುದಿಲ್ಲವೆಂದು ತಿಳಿಸಿದ್ದಾರೆ. ಎಲ್ಲವನ್ನೂ ಪರಿಶೀಲಿಸಿ, ವಿಷಯವು ಇತ್ತೀಚಿನ ಯಾವುದೇ ಘಟನೆಯಾಗಿಲ್ಲದೇ ಇರುವುದರಿಂದ, ಸಾರ್ವಜನಿಕವಾಗಿ ಒಂದಿಷ್ಟು ವಿಚಾರವಿರುವುದರಿಂದ ಇದನ್ನು ನಿಯಮ 60 ರ ಬದಲಾಗಿ 69 ರ ಅಡಿಯಲ್ಲಿ ಚರ್ಚೆಗೆ ಅವಕಾಶ ಮಾಡಿ ಕೊಡುತ್ತೇನೆ. ಪ್ರಶ್ನೋತ್ತರವಾದ ಮೇಲೆ ಈ ವಿಚಾರ ತೆಗೆದು ಕೊಳ್ಳೋಣ.

(ಗೊಂದಲ)

ಅಧ್ಯಕ್ಷರು : ಪ್ರಶ್ನೋತ್ತರವಾದ ಮೇಲೆ ಇದನ್ನು ತೆಗೆದುಕೊಳ್ಳುತ್ತೇವೆ.

(ಗೊಂದಲ)

ಶ್ರೀ ಎ.ಎಸ್.ಪಾಟೀಲ್ (ನಡಹಳ್ಳಿ) : ಪ್ರಶ್ನೋತ್ತರ ಮುಗಿದ ಮೇಲೆ ಕೃಷ್ಣಾ ನದಿ ನೀರಿನ ಸಮಸ್ಯೆಯ ಬಗ್ಗೆ ದಯವಿಟ್ಟು ಚರ್ಚೆಗೆ ಅವಕಾಶ ಕೊಡಬೇಕು.

ಅಧ್ಯಕ್ಷರು : ಆಯಿತು ಈಗ ಪ್ರಶ್ನೋತ್ತರ.

(ಗೊಂದಲ)

ಶ್ರೀ ಶ್ರೀಕಾಂತ ಕುಲಕರ್ಣಿ : ಮಾನ್ಯ ಅಧ್ಯಕ್ಷರೆ, ಪ್ರಶ್ನೋತ್ತರ ನಂತರ ಕೃಷ್ಣಾ ನದಿ ನೀರಿನ ಬಗ್ಗೆ ತಾವು ಕೊಟ್ಟಿರುವ ಮಾತಿನ ಪ್ರಕಾರ ಚರ್ಚೆ ಮಾಡುವುದಕ್ಕೆ ದಯವಿಟ್ಟು ಅವಕಾಶ ಕೊಡಬೇಕು.

(ಗೊಂದಲ)

ಶ್ರೀ ಡಿ.ಕೆ. ಶಿವಕುಮಾರ್ : ಸ್ಟೇಟ್‌ಮೆಂಟ್ ಮಾಡಿಸಿ.

ಅಧ್ಯಕ್ಷರು : ಮುಖ್ಯಮಂತ್ರಿಗಳು ಬರಲಿ. ಆಯಿತು. ಎರಡನ್ನೂ ತೆಗೆದುಕೊಳ್ಳೋಣ. ಈಗ ಪ್ರಶ್ನೋತ್ತರ. ಕೆ.ಎಂ.ಶಿವಲಿಂಗೇಗೌಡರು.

2. ಪ್ರಶ್ನೋತ್ತರ :

(ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ಸೀಮೆಎಣ್ಣೆ ವಿತರಣೆಗೆ ಬಗ್ಗೆ

106 (1138) ಶ್ರೀ ಶಿವಲಿಂಗೇಗೌಡ ಕೆ.ಎಂ. (ಅರಸೀಕೆರೆ) : ಮಾನ್ಯ ಇಂಧನ ಮತ್ತು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅರಸೀಕೆರೆ ಕ್ಷೇತ್ರದಲ್ಲಿ ರದ್ದಾಗಿರುವ ಸೀಮೆಎಣ್ಣೆ ಕಾರ್ಡುದಾರರ ಸಂಖ್ಯೆ ಎಷ್ಟು;

ಆ) ಅರ್ಹ ಫಲಾನುಭವಿಗಳು ಸೀಮೆಎಣ್ಣೆ ಪಡೆಯುವಲ್ಲಿ ವಂಚಿತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಬಂದಿದ್ದಲ್ಲಿ, ಈ ಫಲಾನುಭವಿಗಳಿಗೆ ಸೀಮೆಎಣ್ಣೆ ವಿತರಿಸಲು ತೆಗೆದುಕೊಂಡಿರುವ ಕ್ರಮಗಳೇನು;

ಈ) ಅತಿ ಬಡವರನ್ನು ಸಹ ಅನಿಲ ಕಾರ್ಡುದಾರರೆಂದು ಗುರುತುಪಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಇದರ ನಿರ್ವಹಣೆಗೆ ಯಾವ ಕ್ರಮ ವಹಿಸಲಾಗಿದೆ?

ಶ್ರೀ ಶೋಭಾ ಕರಂದ್ಲಾಜೆ (ಇಂಧನ, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು) :

ಅ) ಯಾವುದೆ ಅರ್ಹ ಸೀಮೆ ಎಣ್ಣೆ ಕಾರ್ಡ್‌ಗಳನ್ನು ರದ್ದುಮಾಡಲಾಗಿರುವುದಿಲ್ಲ. ತಮಗೆ ಸೇರಿದ್ದು ಎಂದು ಹೇಳಿಕೊಂಡು ಯಾರು ಮುಂದೆ ಬಾರದ 4393 ಕಾರ್ಡ್‌ಗಳನ್ನು ಮಾತ್ರ ರದ್ದುಪಡಿಸಲಾಗಿದೆ.

ಆ) ಅರ್ಹ ಫಲಾನುಭವಿಗಳು ಸೀಮೆ ಎಣ್ಣೆಯಿಂದ ವಂಚಿತರಾಗಿರುವ ಉದಾಹರಣೆ ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಅನಿಲ ಸಂಪರ್ಕ ಹೊಂದಿದಲ್ಲಿ ಮಾತ್ರ ಅನಿಲ ಸಂಪರ್ಕ ಕಾರ್ಡ್‌ದಾರರೆಂದು ಗುರುತಿಸಿ ಸೀಮೆ ಎಣ್ಣೆ ನೀಡಲಾಗುತ್ತಿಲ್ಲ.

ಶ್ರೀ ಕೆ.ಎಂ. ಶಿವಲಿಂಗೇಗೌಡ : ಮಾನ್ಯ ಅಧ್ಯಕ್ಷರೆ, ಉತ್ತರ ಒದಗಿಸಿದ್ದಾರೆ. ಅರಸೀಕೆರೆ ಕ್ಷೇತ್ರದಲ್ಲಿ 4,393 ಜನಕ್ಕೆ ಅನಿಲ ಸಂಪರ್ಕ ಹೊಂದಿರತಕ್ಕಂಥವರು ಎಂದು ಹೇಳಿ, ಸೀಮೆಎಣ್ಣೆಯನ್ನು ಕೊಡುವುದನ್ನು ರದ್ದುಪಡಿಸಿದ್ದಾರೆ. ಅರಸೀಕೆರೆಯಲ್ಲಿರುವ ಅನಿಲ ಸಂಪರ್ಕ ಹೊಂದಿರತಕ್ಕಂಥ ವರೆಲ್ಲರಿಗೂ ರದ್ದುಪಡಿಸಿಲ್ಲ. ರದ್ದು ಪಡಿಸುವುದಕ್ಕೆ ಹೋದರೆ ಯಾರಿಗೂ ಸೀಮೆಎಣ್ಣೆ ಕೊಡುವ ಹಾಗೆ ಇಲ್ಲ. ಸುಮಾರು ಐವತ್ತು ಸಾವಿರ ಕಾರ್ಡುಗಳಿದ್ದು ಎಲ್ಲವನ್ನೂ ರದ್ದು ಪಡಿಸುವುದಕ್ಕೆ ಆಗುವುದಿಲ್ಲ. ಸುಮಾರು ವರ್ಷಗಳ ಹಿಂದೆ ಅರಸೀಕೆರೆಯಲ್ಲಿ ಸೀಮೆಎಣ್ಣೆ ಹೊಂದಿರುವ ಕಾರ್ಡುಗಳು ಜಾಸ್ತಿಯಿವೆ, cut down ಮಾಡಿ ಎಂದು ಸರ್ಕಾರದಿಂದ ನಿರ್ದೇಶನ

ಬಂದಾಗ ಯಾರು ಬಡಪಾಯಿಗಳು, ತಾಂಡಾಗಳು, ಕಾಲೋನಿಗಳು, ಹಟ್ಟಿಗಳು ಇವೆ, ಅವರಿಗೆ 4,500 ಜನಕ್ಕೆ ರದ್ದು ಮಾಡಿದ್ದಾರೆ. ಅನಿಲ ಸಂಪರ್ಕ ಹೊಂದಿರುವಂಥವರಿಗೆ ಈಗಲೂ ಸೀಮೆಎಣ್ಣೆ ಬರುತ್ತಲೇ ಇದೆ. ಬಹುಶಃ ಇದು ಕರ್ನಾಟಕ ರಾಜ್ಯದಲ್ಲಿರುವ ಎಲ್ಲಾ ಶಾಸಕರ ಸಮಸ್ಯೆ ಎಂದು ಕಾಣುತ್ತದೆ. ಅನಿಲ ಸಂಪರ್ಕ ಇರುವಂಥವರಿಗೆ ಅವರು ತೆಗೆದಿಲ್ಲ. ನೀವು ಬೇಕಾದರೆ ಮಾಹಿತಿ ತರಿಸಿ. ಇದು ಚರ್ಚೆಯಾಗಬೇಕು. ಪಾಪ ದಿವಸ ಅವರು 2–3 ಲೀಟರ್ ಸಿಮೇಎಣ್ಣೆಗೆ ಮನೆಗೆ ಬರುತ್ತಾರೆ.

ಅಧ್ಯಕ್ಷರು : ಈಗ ಅವರು ಉತ್ತರ ಹೇಳಲಿ, ಉತ್ತರ ಹೇಳಿದ ಮೇಲೆ ಕ್ಲಾರಿಫಿಕೇಷನ್ ಕೇಳಿ.

ಶ್ರೀ ಕೆ.ಎಂ.ಶಿವಲಿಂಗೇಗೌಡ : ಮಾನ್ಯ ಅಧ್ಯಕ್ಷರೆ, 4393 ಜನ ಕಾರ್ಡುದಾರರಿಗೆ ಅನಿಲ ಇದೆ ಎಂದು ಇವರು ತೆಗೆದಿದ್ದಾರೆ. ಆದರೆ, ಇವರ್ಯಾರು ಅನಿಲವನ್ನು ಹೊಂದಿರಕ್ಕಂಥವರಲ್ಲ. ಆದ್ದರಿಂದ, ಈ ಮಾಹಿತಿಯನ್ನು ತಾವು ತರಿಸಬೇಕು. ಅಲ್ಲಿರುವ ಹಟ್ಟಿ, ತಾಂಡಗಳು, ಕಾಲೋನಿಯಲ್ಲಿರುವ ಜನರದ್ದು ತೆಗೆದಿದ್ದಾರೆ. ಅವರು ನಮಗೆ ಸೀಮೆಎಣ್ಣೆ ಕೊಡುತ್ತಿಲ್ಲವೆಂದು ಬರುತ್ತಿದ್ದಾರೆ. ಆದ್ದರಿಂದ, ತಾವು ಇದರ ಬಗ್ಗೆ ದಯವಿಟ್ಟು ತನಿಖೆ ಮಾಡಿಸಬೇಕು. ಇದರ ಬಗ್ಗೆ ನಾವು ಹೇಳಿ ಸಾಕಾಗಿದೆ. ನಾವು ಸಹ ಇದರ ಬಗ್ಗೆ ಬರೆದಿದ್ದೇವೆ ಇವರ್ಯಾರಿಗೂ ಅನಿಲ ಇಲವೆಂದು ಪರಿಶೀಲನೆ ಕೂಡ ಈಗಾಗಲೇ ಆಗಿದೆ. ಪರಿಶೀಲನೆ ಆದ ನಂತರ ಸೀಮೆಎಣ್ಣೆ ಬರುತ್ತದೆಂದು ಪ್ರತಿದಿವಸ ಹೇಳುತ್ತಿದ್ದಾರೆ. Public Accounts Committee ಯಲ್ಲಿ ಕೂಡ ಇದರ ಬಗ್ಗೆ ನಾವು ಕೇಳಿದ್ದೇವೆ.

ಅಧ್ಯಕ್ಷರು : ಮಾನ್ಯ ಸಚಿವರು ಮೊದಲು ಉತ್ತರ ಹೇಳಲಿ. ಆನಂತರ ತಾವು ಪ್ರಶ್ನೆ ಕೇಳಿ. ಇದು ಪ್ರಶ್ನೋತ್ತರ, ಅವರು ಉತ್ತರ ಹೇಳಿದ ಮೇಲೆ ಕ್ಲಾರಿಫಿಕೇಷನ್ ಕೇಳಿ.

ಕುಮಾರಿ ಶೋಭಾ ಕರಂದ್ಲಾಜೆ (ಇಂಧನ, ಆಹಾರ ಮತ್ತು ನಾಗರೀಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಕೇವಲ ಸೀಮೆಎಣ್ಣೆಗೆಂದು ಪ್ರತ್ಯೇಕ ಕಾರ್ಡ್ ಇಲ್ಲ. ಇದು ನಿಮಗೂ ಮತ್ತು ಮಾನ್ಯ ಸದಸ್ಯರಿಗೂ ಸಹ ಗೊತ್ತಿದೆ. ಅನಿಲ ರಹಿತ ಮತ್ತು ಅನಿಲ ಸಹಿತ ರೇಷನ್ ಕಾರ್ಡ್ ಎಂದು ಇದೆ. ಯಾರಿಗೆ ಅನಿಲ ಇರುತ್ತದೆಯೋ ಅವರ ಕಾರ್ಡ್‌ನಲ್ಲಿ ಅನಿಲ ಇದೆ ಎಂದು ಮುದ್ರಣವಾಗಿರುತ್ತದೆ. ಅನಿಲ ಇಲ್ಲದೆ ಇದ್ದರೆ ಅನಿಲ ಇಲ್ಲವೆಂದು ಕಾರ್ಡ್‌ನಲ್ಲಿ

ಮುದ್ರಣವಾಗಿರುತ್ತದೆ. ತಮಗೆಲ್ಲ ಗೊತ್ತಿರುವ ಹಾಗೆ ಅನಿಲ ಇಲ್ಲದೆ ಇರುವವರಿಗೆ ಸೀಮೆಎಣ್ಣೆಯನ್ನು ಬೆಂಗಳೂರು ನಗರದಲ್ಲಿ 7 ಲೀಟರ್ ಮತ್ತು ಉಳಿದಂಥ ನಗರ ಪ್ರದೇಶಗಳಲ್ಲಿ 6 ಲೀಟರ್ ಮತ್ತು ಗ್ರಾಮಾಂತರ ಪ್ರದೇಶದಲ್ಲಿ 3 ಲೀಟರ್ ಇತ್ತು, ಆದರೆ, ಈಗ 4 ಲೀಟರ್ ಸೀಮೆಎಣ್ಣೆಯನ್ನು ಕೊಡುತ್ತಿದ್ದೇವೆ. ಕಾರ್ಡ್ ಇಲ್ಲದವರಿಗೆ ಹೊಸದಾಗಿ ಕಾರ್ಡ್ ಕೊಡುವುದಕ್ಕೆ ಈಗಾಗಲೇ online ನಲ್ಲಿ ಕಾರ್ಡ್ ಕೊಡುವ ಬಗ್ಗೆ ಪ್ರಸ್ತಾಪ ಮಾಡಿದ್ದೇವೆ. ಈಗಾಗಲೇ ಸುಮಾರು 8.5 ಲಕ್ಷ ಹೊಸದಾಗಿ ಕಾರ್ಡ್ ತೆಗೆದುಕೊಳ್ಳುವಂಥ ಜನರು ಆನ್‌ಲೈನ್‌ನಲ್ಲಿ ನೋಂದಾಣಿ ಮಾಡಿಕೊಂಡಿದ್ದಾರೆ. ಆದರೆ ಇಲ್ಲಿ ಯಾರಿಗೆ ರೇಷನ್ ಕಾರ್ಡ್ ಇಲ್ಲವೋ ಅವರುಗಳು ಹೊಸದಾಗಿ ರೇಷನ್ ಕಾರ್ಡ್ ಮಾಡಿಕೊಳ್ಳುವುದಕ್ಕೆ ಅವಕಾಶ ಇದೆ. ಮಾನ್ಯ ಸದಸ್ಯರು ರೇಷನ್ ಕಾರ್ಡ್ ಬಗ್ಗೆ ಮಾತನಾಡುತ್ತಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಸೀಮೆಎಣ್ಣೆಗೆಂದು ನಾವು ಪ್ರತ್ಯೇಕವಾದ ಕಾರ್ಡ್ ಕೊಡುವುದಿಲ್ಲ. ರೇಷನ್ ಕಾರ್ಡ್‌ನಲ್ಲಿ ಅನಿಲ ರಹಿತ ಮತ್ತು ಅನಿಲ ಸಹಿತ ಎಂದು ಮಾತ್ರ ಇದೆ.

ಅಧ್ಯಕ್ಷರು : ಕಾರ್ಡ್ ಇಲ್ಲದವರಿಗೆ ಸೀಮೆಎಣ್ಣೆ ಕೊಡಿ ಎಂದು ಕೇಳುತ್ತಿದ್ದಾರೆ.

ಕುಮಾರಿ ಶೋಭಾ ಕರಂದ್ಲಾಜೆ : ರೇಷನ್ ಕಾರ್ಡ್ ಇಲ್ಲದೆ ಇರುವವರು ಕಾರ್ಡ್ ಅನ್ನು ಮಾಡಿಸಿಕೊಳ್ಳಬೇಕು. ಈಗ ಆನ್‌ಲೈನ್ ಮೂಲಕ ಕಾರ್ಡ್ ಮಾಡಿಕೊಳ್ಳುವುದು ಸುಲಭವಾಗಿದೆ.

ಅಧ್ಯಕ್ಷರಿಗೆ : ಅಲ್ಲಿಯವರೆಗೆ ಸೀಮೆಎಣ್ಣೆ ಕೊಡಿ ಎಂಬುದು ಅವರ ಬೇಡಿಕೆಯಾಗಿದೆ.

ಶ್ರೀ ವೆಂಕಟರಾವ್ ನಾಡಗೌಡ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ತಪ್ಪಾಗಿ ಅರ್ಥೈಸಿಕೊಳ್ಳುತ್ತಿದ್ದಾರೆ. ಮಾನ್ಯ ಸದಸ್ಯರು ಕಾರ್ಡ್ ಬಗ್ಗೆ ಮಾತನಾಡುತ್ತಿಲ್ಲ. ನೀವು ಏನು ಮಾಡುತ್ತಿದ್ದೀರೆಂದರೆ, ಅನಿಲ ರಹಿತ ಕಾರ್ಡ್‌ಗಳಿಗೆ ಸೀಮೆಎಣ್ಣೆ ಜಾಸ್ತಿ ಹೋಗುತ್ತಿದೆ ಎಂದು ಕೆಲವು ಕಾರ್ಡ್‌ಗಳನ್ನು ಕಟ್ ಮಾಡಬೇಕೆಂದು ಈಗಾಗಲೇ ಆದೇಶವಾಗಿರುವುದರಿಂದ ಯಾವುದು ಬೇಕೋ ಅದನ್ನು ಕಟ್ ಮಾಡುತ್ತಿದ್ದಾರೆ. ಗ್ಯಾಸ್ ಇದ್ದವರಿಗೆಲ್ಲರಿಗೂ ನೀವು ಕಟ್ ಮಾಡಿಲ್ಲ, ಗ್ಯಾಸ್ ಇರುವಂಥ ಕೆಲವರಿಗೂ ಕೊಡುತ್ತಿದ್ದೀರಿ. ಗ್ಯಾಸ್ ಇಲ್ಲದೆ ಇರುವ ಬಡವರಿಗೆ ಕಟ್ ಮಾಡಿದ್ದೀರಿ ಎಂಬುದು ಇವರ ವಾದವಾಗಿದೆ ಇದನ್ನು ತನಿಖೆ ಮಾಡಿಸಬೇಕೆಂದು ಅವರು ಹೇಳುತ್ತಿದ್ದಾರೆ.

ಶ್ರೀ ಕೆ.ಎಂ.ಶಿವಲಿಂಗೇಗೌಡ : ನನ್ನ ಕ್ಷೇತ್ರದಲ್ಲಿರುವ ಸಮಸ್ಯೆ ಬಗ್ಗೆ ಹೇಳುತ್ತಿದ್ದೇನೆ.

ಶ್ರೀ ವೆಂಟಕರಾವ್ ನಾಡಗೌಡ : ಎಲ್ಲ ಕಡೆ ಇದೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ : ಎಲ್ಲ ಕಡೆ ಇದ್ದರೆ ನೀವು ಪ್ರಶ್ನೆ ಮಾಡಿಕೊಳ್ಳಿ.

ಶ್ರೀ ವೈ.ಎನ್. ರುದ್ರೇಶ್‌ಗೌಡ : ಮಾನ್ಯ ಅಧ್ಯಕ್ಷರೆ, ಇವತ್ತಿನದಿವಸ ಕಡುಬಡವರಿಗೆ ನಾಲ್ಕು ಲೀಟರ್ ಸೀಮೆಎಣ್ಣೆ ಒದಗಿಸಿದರೆ ತಪ್ಪಾಗಲಾರದು. ಗ್ಯಾಸ್ ಇರಲಿ, ಬಿಡಲಿ ಅವರಿಗೆ ಸೀಮೆಎಣ್ಣೆ ಒದಗಿಸುವುದು ನಮ್ಮ ದೇಶದ ಧರ್ಮ ಮತ್ತು ಆಹಾರ ಇಲಾಖೆಯ ಕರ್ತವ್ಯ ಕೂಡ ಆಗಿದೆ. ಆದ್ದರಿಂದ, ನನ್ನ ದೃಷ್ಟಿ ಏನೆಂದರೆ, ಪ್ರತಿ ಒಬ್ಬ ಬಿಪಿಎಲ್ ಹೋಲ್ಡ್‌ರಿಗೂ ಸಹ 4 ಲೀಟರ್ ಸೀಮೆ ಎಣ್ಣೆ ಒದಗಿಸುವಂಥದನ್ನು ಸರ್ಕಾರ ಮಾಡಬೇಕು. ಇದರಲ್ಲಿ ಯಾರು ಗ್ಯಾಸ್ ಹೊಂದಿದ್ದಾರೆ, ಯಾರು ಹೊಂದಿಲ್ಲ ಎಂಬ ವ್ಯತ್ಯಾಸಗಳು ಬೇಡ. ಪ್ರತಿಯೊಬ್ಬರಿಗೂ ನಾಲ್ಕು ಲೀಟರ್ ಸೀಮೆಎಣ್ಣೆ ಕೊಡುವಂಥ ವ್ಯವಸ್ಥೆ ಮಾಡಿ.

ಶ್ರೀ ಯು.ಟಿ.ಖಾದರ್ : ಬರಗಾಲ ಸಂದರ್ಭದಲ್ಲಿ ಕೂಡ ಸೀಮೆಎಣ್ಣೆಯನ್ನು ಕೊಡುವುದಿಲ್ಲವೆಂದರೆ ಹೇಗೆ?

ಶ್ರೀ ಡಿ.ಎನ್. ಜೀವರಾಜ್ : ಮಾನ್ಯ ಅಧ್ಯಕ್ಷರೆ, ಈ ಗೊಂದಲ ಸರಿಯಾಗಬೇಕಾದರೆ ಮಾನ್ಯ ಮಂತ್ರಿಗಳು ಏನು ಮಾಡಬೇಕೆಂದರೆ, ಕೆಳಹಂತ ದಲ್ಲಿರುವ ಅಧಿಕಾರಿಗಳು ಸರ್ವೆ ಮಾಡಿ ಗ್ಯಾಸ್ ಇಲ್ಲದೆ ಇರುವವರಿಗೆ ಇದೆ ಎಂದು ಇರುವವರಿಗೆ ಇಲ್ಲ ಎಂದು ತಪ್ಪು ಮಾಹಿತಿ ಕೊಡುವಂಥ ಅಧಿಕಾರಿಗಳಿಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆಂದು ಇಲ್ಲಿಂದ ಏನಾದರೂ ಆದೇಶ ಕೊಟ್ಟರೆ ಅಲ್ಲಿ ಸ್ವಲ್ಪ ಸರಿಯಾಗಬಹುದು. ಕೆಳ ಹಂತದಲ್ಲಿ ತಪ್ಪು ಮಾಡುತ್ತಿರುವುದಕ್ಕೆ ಇಲ್ಲಿ ಸರ್ಕಾರದ ಮಂತ್ರಿಗಳು ಹೊಣೆಯಾಗುವಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಆದ್ದರಿಂದ, ಕೆಳಹಂತದ ಅಧಿಕಾರಿಗಳಿಗೆ ಸೀರಿಯಸ್ ಆದಂಥ ಒಂದು ಆದೇಶ ಕೊಡಿ.

ಅಧ್ಯಕ್ಷರು : ಉತ್ತರ ಹೇಳಲಿ.

ಶ್ರೀ ಯು.ಟಿ.ಖಾದರ್ : ಇಡೀ ರಾಜ್ಯದಲ್ಲಿ ಈ ಸಮಸ್ಯೆಯಾಗಿದೆ.

ಅಧ್ಯಕ್ಷರು : ಆ ಪ್ರಶ್ನೆ ಕೇಳಿದವರಿಗೇ ಪ್ರಶ್ನೆ ಕೇಳುವುದಕ್ಕೆ ಬಿಡುತ್ತಿಲ್ಲ. ಈ ರೀತಿಯಾದರೆ ಹೇಗೆ?

ಶ್ರೀ ಹೆಚ್.ಕೆ.ಕುಮಾರಸ್ವಾಮಿ : ಮಾನ್ಯ ಅಧ್ಯಕ್ಷರೆ, ಇವತ್ತಿನದಿವಸ ಏನಾಗಿದೆ ಎಂದರೆ, ಅನಿಲ ಇಲ್ಲದಿದ್ದರೂ ಕೂಡ ಅನಿಲ ಇದೆ ಎಂದು ಪ್ರತಿ ಕ್ಷೇತ್ರದಲ್ಲಿಯೂ ಸಾವಿರಾರು ಕಾರ್ಡ್‌ನಲ್ಲಿ ನಮೂದಾಗಿದೆ. ಇದನ್ನು ಮೊದಲು ಸರಿಪಡಿಸಬೇಕು. ಎರಡನೆಯದಾಗಿ ಅನಿಲ ಇದ್ದವರಿಗೂ ಕೂಡ ಸೀಮೆ ಎಣ್ಣೆ ಕೊಡಬೇಕೆಂಬುದು ನಮ್ಮೆಲ್ಲರ ಒತ್ತಾಯ. ಮಲೆನಾಡು ಭಾಗದಲ್ಲಿ ಅನಿಲ ಇರುತ್ತದೆ. ಅಲ್ಲಿ ಸೀಮೆಎಣ್ಣೆ ಇರುವುದಿಲ್ಲ ಮತ್ತು ವಿದ್ಯುತ್ ಕೂಡ ಇರುವುದಿಲ್ಲ. ನಗರ ಪ್ರದೇಶಗಳಲ್ಲಿ ಸದಾ ವಿದ್ಯುತ್ ಇರುತ್ತದೆ. ನಗರ ಪ್ರದೇಶಕ್ಕೆ ಹೆಚ್ಚಿಗೆ ಕೊಡುವುದಕ್ಕೆ ಅವಕಾಶ ಮಾಡಿದ್ದೀರಿ. ಆದ್ದರಿಂದ ಮಲೆನಾಡಿನ ಎಲ್ಲಾ ಭಾಗಗಳಿಗೆ ಕೂಡ ಸೀಮೆಎಣ್ಣೆಯನ್ನು ಕೊಡಿಸುವಂಥ ಕೆಲಸ ಮಾಡಿ.

ಶ್ರೀ ಗೋಪಾಲ ಕೃಷ್ಣ ಬೇಳೂರು : ಮಾನ್ಯ ಅಧ್ಯಕ್ಷರೆ, 24 ಗಂಟೆ ಕರೆಂಟ್ ಕೊಟ್ಟರೆ ಸೀಮೆಎಣ್ಣೆ ಬೇಡ. ಮಲೆನಾಡು ಪ್ರದೇಶದಲ್ಲಿರುವ ಬಿಪಿಎಲ್ ಮತ್ತು ಎಪಿಎಲ್ ಎರಡೂ ಕಾರ್ಡ್‌ನವರಿಗೂ ಕೂಡ ಸೀಮೆಎಣ್ಣೆ ಬೇಕಾಗುತ್ತದೆ.

ಕುಮಾರಿ ಶೋಭಾ ಕರಂದ್ಲಾಜೆ : ಅನಿಲ ಇದ್ದವರಿಗೂ ಸೀಮೆಎಣ್ಣೆ ಕೊಡಬೇಕೆಂಬುದು ಮಾನ್ಯ ರುದ್ರೇಶ್‌ಗೌಡರು ಮತ್ತು ಉಳಿದ ಎಲ್ಲ ಮಾನ್ಯ ಸದಸ್ಯರುಗಳ ಭಾವನೆಯಾಗಿದೆ. ನಮ್ಮ ರಾಜ್ಯಕ್ಕೆ ಕೇಂದ್ರ ಸರ್ಕಾರದಿಂದ ಪ್ರತಿ ತಿಂಗಳು 44,568 ಕಿಲೋ ಲೀಟರ್ ಸೀಮೆಎಣ್ಣೆ ಮಾತ್ರ ಒದಗಿಸಲಾಗುತ್ತಿದೆ. ಕೇಂದ್ರ ಸರ್ಕಾರದ ಪ್ರಕಾರ ನಮ್ಮ ರಾಜ್ಯದಲ್ಲಿ ಕೇವಲ 32 ಲಕ್ಷ ಬಿಪಿಎಲ್ ಕಾರ್ಡ್‌ಗಳು ಮಾತ್ರ ಇರಬೇಕಾಗುತ್ತದೆ. ಅಂದರೆ ಇಷ್ಟು ಸೀಮೆಎಣ್ಣೆಯನ್ನು 32 ಲಕ್ಷ ಜನರಿಗೆ ಹಂಚಿ ಎಂಬ ಕಾರಣಕ್ಕಾಗಿ ಕೇಂದ್ರ ಸರ್ಕಾರ ಸೀಮೆಎಣ್ಣೆ ಕೊಡುತ್ತದೆ. ಆದರೆ ನಮ್ಮ ರಾಜ್ಯದಲ್ಲಿ ಬಿಪಿಎಲ್ ಕಾರ್ಡ್ ಎಷ್ಟಿದೆ?

ಅಧ್ಯಕ್ಷರು : ಮಾನ್ಯ ಶಿವಲಿಂಗೇಗೌಡರೆ, ಮಾನ್ಯ ಮಂತ್ರಿಯವರು ಉತ್ತರ ಕೊಡಲಿ. ಆನಂತರ ತಾವು ಕೇಳಿ. ದಯವಿಟ್ಟು ಕುಳಿತುಕೊಳ್ಳಿ. ಇಲ್ಲದಿದ್ದರೆ ನಾನು ಮುಗಿಸುತ್ತೇನೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ : ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಂಥ ಸಮಸ್ಯೆ ಬಗ್ಗೆ ನಾನು ಕೇಳಿದ್ದೇನೆ. ನನ್ನ ಕ್ಷೇತ್ರದಲ್ಲಿ ನೀವೇನು 4500 ಜನರದ್ದು ತೆಗೆದಿದ್ದೀರಿ. ಆದರೆ, ಅವರೆಲ್ಲರೂ ಅರ್ಹ ಫಲಾನುಭವಿಗಳಾಗಿದ್ದಾರೆ. ನಿಮ್ಮ ಕಾನೂನಿನ ಚೌಕಟ್ಟಿನೊಳಗೆ ನಿರ್ಗತಿಕರು, ತಾಂಡದಲ್ಲಿ ಮತ್ತು ಹಟ್ಟಿಯಲ್ಲಿ ಹಾಗೂ ಕಾಲೋನಿಯಲ್ಲಿರುವವರು

ಸುಮಾರು ಮೂರುವರೆ ಸಾವಿರ ಜನ ಬರುತ್ತಾರೆ. ಅರಸೀಕೆರೆ ತಾಲ್ಲೂಕಿನಲ್ಲಿ ಅನಿಲ ಹೊಂದಿರುವ ಕಾರ್ಡ್‌ಗಳು ಬಹಳ ಇವೆ ಆದ್ದರಿಂದ, ಇಷ್ಟು ಪರ್ಸೆಂಟ್ ತೆಗೆದು ಹಾಕಿ ಎಂದು ಸರ್ಕಾರದಿಂದ ಆದೇಶ ಬಂದ ನಂತರ ಅವರು ಹೋಗಿ ನ್ಯಾಯ ಬೆಲೆ ಅಂಗಡಿ ಮಾಲೀಕರಿಂದ ಮಾಹಿತಿ ಪಡೆದುಕೊಂಡು ಯಾರಿಗೆ ಧ್ವನಿ ಇಲ್ಲದವರಿಗೆ ಮತ್ತು ಯಾರು ಬಂದು ಕೇಳುವುದಿಲ್ಲವೋ ಅಂಥ ಒಟ್ಟು 4 ಸಾವಿರ ಜನರ ಕಾರ್ಡ್‌ನಲ್ಲಿ ತೆಗೆದು ಹಾಕಿದ್ದಾರೆ. ಅದರ ಬಗ್ಗೆ ತನಿಖೆ ಮಾಡಿ ಅವರಿಗೆ ನ್ಯಾಯ ದೊರಕಿಸಿಕೊಡಿ ಎಂದು ನಾನು ಕೇಳಿದ್ದೇನೆ. ನೀವು ಬೇಕಾದರೆ, ಎಪಿಎಲ್ ಮತ್ತು ಬಿಪಿಎಲ್ ಅಥವಾ ಯಾರಿಗಾದರೂ ಕೊಡಿ. ಆದರೆ, ನನ್ನ ಕ್ಷೇತ್ರದಲ್ಲಿ ಅನ್ಯಾಯವಾಗಿ ರುವಂಥ ಈ ನಾಲ್ಕು ಸಾವಿರ ಜನರಿಗೆ ನ್ಯಾಯ ದೊರಕಿಸಿ ಕೊಡಿ. ಅವರಿಗೆ ಕೊಡುವುದಕ್ಕೆ ಏನು ಮಾಡುತ್ತೀರಿ ಎಂಬ ಬಗ್ಗೆ ಹೇಳಿ.

ಕುಮಾರಿ ಶೋಭಾ ಕರಂದ್ಲಾಜೆ : ಮಾನ್ಯ ಸಭಾಧ್ಯಕ್ಷರೆ, ಇವತ್ತಿನ ದಿವಸ ರಾಜ್ಯಕ್ಕೆ ಬರುವಂಥ ಸೀಮೆ ಎಣ್ಣೆಯನ್ನು 32 ಲಕ್ಷ ಜನರಿಗೆ ಕೊಡಬೇಕೆಂದು ಇದೆ. ಆದರೆ, ನಮ್ಮ ರಾಜ್ಯದಲ್ಲಿ 98 ಲಕ್ಷ ಜನ ಬಿಪಿಎಲ್ ಕಾರ್ಡ್ ಅನ್ನು ಈಗಾಗಲೇ ಹೊಂದಿದ್ದಾರೆ. ಮಾನ್ಯ ಶಿವಲಿಂಗೇಗೌಡರು ಹೇಳಿದ ಹಾಗೆ ಪರ್ಟಿಕ್ಯುಲರ್ ಆಗಿ ಯಾರಿಗಾದರೂ ಕ್ಯಾನ್ಸಲ್ ಆಗಿದ್ದರೆ ಮಾಹಿತಿ ಕೊಡಲಿ. ಇವತ್ತಿನದ ದಿವಸ ಮನೆಯ ಮಾಹಿತಿ ಇರುತ್ತದೆ, ಮಾನ್ಯ ಅಧ್ಯಕ್ಷರೆ, ತಮ್ಮ ಮೂಲಕ ಇಡೀ ರಾಜ್ಯದ ಜನತೆಗೆ ಹೇಳುವುದಕ್ಕೆ ಬಯಸುವು ದೇನೆಂದರೆ, ಮನೆಯ ತೆರಿಗೆ ಬಿಲ್ ಅನ್ನು ಕೊಡಬೇಕು. ಅಥವಾ ಅಲ್ಲಿ ಮನೆ ಇದೆ ಎಂಬುದಕ್ಕೆ ಯಾವುದಾದರೊಂದು ದಾಖಲೆಯನ್ನು ಕೊಡಬೇಕು. ನಗರ ಪ್ರದೇಶದಲ್ಲಿಯಾದರೆ, ಅವರ ವಿದ್ಯುತ್ ಬಿಲ್‌ನ ಆರ್.ಆರ್. ಸಂಖ್ಯೆಯನ್ನು ಕೊಡಬೇಕು. ಅಲ್ಲಿ ಮನೆ ಇದೆ, ಕುಟುಂಬ ಇದೆ ಮತ್ತು ಜನರಿದ್ದಾರೆ ಎಂಬುದಕ್ಕೆ ಯಾವುದಾದರೂ ಮಾಹಿತಿ ಕೊಟ್ಟು ಅದು ದೃಢಪಟ್ಟರೆ ಅಂಥವರಿಗೆಲ್ಲರಿಗೂ ರಾಜ್ಯದಲ್ಲಿ ರೇಷನ್ ಕಾರ್ಡ್ ಕೊಡುವುದಕ್ಕೆ ನಮ್ಮ ಇಲಾಖೆ ಬದ್ಧ ಇದೆ. ರಾಜ್ಯದಲ್ಲಿ ಯಾರೂ ಕೂಡ ರೇಷನ್ ಕಾರ್ಡ್‌ನಿಂದ ವಂಚಿತರಾಗಬಾರದೆಂಬುದು ನಮ್ಮ ಉದ್ದೇಶವಾಗಿದೆ. ಮತ್ತೆ ರಾಜ್ಯದಲ್ಲಿ 1.68 ಕೋಟಿ ಬೋಗಸ್ ರೇಷನ್ ಕಾರ್ಡ್‌ಗಳ ವಿತರಣೆಯಾಗಿದೆ. ಇಂಥ ಬೋಗಸ್ ಕಾರ್ಡ್‌ಗಳನ್ನು ನಿಲ್ಲಿಸಬೇಕು. ಈ ರಾಜ್ಯದ ಎಲ್ಲಾ ಕುಟುಂಬಗಳಿಗೆ ರೇಷನ್ ಕಾರ್ಡ್ ಸಿಗಬೇಕೆಂಬ ದೃಷ್ಟಿಯಿಂದ ಇಲಾಖೆ ಕೆಲಸವನ್ನು ಮಾಡುತ್ತಿದೆ. ನಾನು ಈಗಾಗಲೇ ಹೇಳಿದಂತೆ 98 ಲಕ್ಷ ಜನ ಬಿಪಿಎಲ್

ಕಾರ್ಡ್ ಹೊಂದಿದ್ದಾರೆ. ಅವರಿಗೆ ಕೇಂದ್ರದಿಂದ ಬರುವ 48,568 ಕಿಲೋ ಮೀಟರ್ ಸೀಮೆ ಎಣ್ಣೆಯನ್ನು ಹಂಚುವಂಥದನ್ನು ನಾವು ಮಾಡುತ್ತಿದ್ದೇವೆ. ಮಾನ್ಯ ಶಿವಲಿಂಗೇಗೌಡರ ಕ್ಷೇತ್ರದಲ್ಲಿ ಪರ್ಟಿಕ್ಯುಲರ್ ಆಗಿ ಯಾವುದಾದರೂ ಜನರಿಗೆ ಯಾವ ಕಾರಣಕ್ಕಾಗಿ ರೇಷನ್ ಕಾರ್ಡ್ ಕ್ಯಾನ್ಸಲ್ ಆಗಿದೆ ಎಂಬ ಬಗ್ಗೆ ಅವರು ಮಾಹಿತಿ ಕೊಟ್ಟರೆ ಪರಿಶೀಲನೆ ಮಾಡುತ್ತೇವೆ.

ಶ್ರೀ ಕೆ.ಎಂ.ಶಿವಲಿಂಗೇಗೌಡ : ರೇಷನ್ ಕಾರ್ಡ್ ಕೊಟ್ಟಿದ್ದಾರೆ. ಆದರೆ, ಅದರಲ್ಲಿ ಅನಿಲ ಇದೆ ಎಂದು ಹಾಕಿದ್ದಾರೆ. ಆದರೆ, ಅವರ ಹತ್ತಿರ ಅನಿಲ ಇಲ್ಲ. ಅವರು ಇವತ್ತಿಗೂ ಕೂಡ ಸೌದೆಯಲ್ಲಿ ಮಾಡುತ್ತಿದ್ದಾರೆ. ಇದರ ಬಗ್ಗೆ ತನಿಖೆ ಮಾಡಿ ಅವರಿಗೆ ಕೊಡಬೇಕೆಂದು ತೀರ್ಮಾನ ಕೂಡ ಆಗಿದೆ. ಆದರೆ, ಅವರಿಗೆ ಕೊಡುತ್ತೇವೆಂದು ನಾಲ್ಕು ವರ್ಷಗಳಿಂದ ಹೇಳಿಕೊಂಡು ಬರುತ್ತಿದ್ದಾರೆಯೇ ಹೊರತು ಇನ್ನೂ ಕೊಟ್ಟಿಲ್ಲ. ಇವರುಗಳು ನಿಜವಾದ ಫಲಾನುಭವಿಗಳಾಗಿದ್ದಾರೆ. ಅವರ ಕಾರ್ಡ್‌ಗೆ ರೇಷನ್ ಕೊಡುತ್ತಿದ್ದಾರೆ. ಆದರೆ, ಅವರಿಗೆ ಸೀಮೆಎಣ್ಣೆ ಕೊಡುತ್ತಿಲ್ಲ. ಅವರ ಕಾರ್ಡ್‌ನಲ್ಲಿ ಅನಿಲ ಇದೆ ಎಂದು ಸೀಮೆಎಣ್ಣೆ ತೆಗೆದು ಹಾಕಿದ್ದಾರೆ.

ಕುಮಾರಿ ಶೋಭಾ ಕರಂದ್ಲಾಜೆ : ಅನಿಲ ಇಲ್ಲದವರಿಗೆ ಅನಿಲ ಇದೆ ಎಂದು ಕಾರ್ಡ್‌ನಲ್ಲಿ ಎಂಟ್ರಿಯಾಗಿ ಅವರಿಗೆ ಸಿಗದಿದ್ದರೆ ಅಂಥವುಗಳ ಬಗ್ಗೆ ಪರಿಶೀಲನೆ ಮಾಡಿ ಅವರಿಗೆ ಕೊಡುವಂಥದನ್ನು ತಕ್ಷಣ ನಾವು ಮಾಡುತ್ತೇವೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ : ಅವರಿಗೆ ನಾಲ್ಕು ವರ್ಷಗಳಿಂದ ಸೀಮೆಎಣ್ಣೆ ಕೊಟ್ಟಿಲ್ಲ. ದಯವಿಟ್ಟು ಎನ್ಕ್ವೈರಿ ಮಾಡಿಸಿ ನಿಮ್ಮ ಅಧಿಕಾರಿಗಳನ್ನು ಕಳುಹಿಸಿ ಅವರಿಗೆ ಬೇಗ ಸೀಮೆಎಣ್ಣೆ ಕೊಡಿಸಿ.

ಕುಮಾರಿ ಶೋಭಾ ಕರಂದ್ಲಾಜೆ : ಯಾರ್ಯಾರಿಗೆ ಕಾರ್ಡು ಇದ್ದು ಅನಿಲ ಇಲ್ಲದೆ ಸೀಮೆಎಣ್ಣೆ ಸಿಗುತ್ತಿಲ್ಲ ಅಂತಹವುಗಳನ್ನು ಪರಿಶೀಲನೆ ಮಾಡಿ ಇಮ್ಮಿಡಿಯಟ್ಟಾಗಿ ಅಧಿಕಾರಿಗಳನ್ನು ಕಳುಹಿಸಿ ಪರಿಶೀಲಿಸಿ ಅವರಿಗೆ ನ್ಯಾಯ ಒದಗಿಸುವಂಥಹ ಕೆಲಸವನ್ನು ಮಾಡುತ್ತೇನೆ.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, ಮಾನ್ಯ ಶಿವಲಿಂಗೇಗೌಡರ ಕ್ಷೇತ್ರ ಒಂದೇ ಅಲ್ಲ, ಇಡೀ ರಾಜ್ಯದಲ್ಲಿ ಎಲ್ಲಾ ಕಡೆ ಇದೇ ಪರಿಸ್ಥಿತಿ ಇದೆ. ಒಂದು ವರ್ಷದಿಂದ ಕೆಲವರು ಕಾರ್ಡ್ ಇಲ್ಲದೆ ರೇಷನ್ ಕಾರ್ಡಿಗಾಗಿ ಸಾಯುತ್ತಿದ್ದಾರೆ. ಯಾರು ನಿಜವಾದ ಫಲಾನುಭವಿಗಳಿದ್ದಾರೆ ಅವರಿಗೆ ಕೊಡಿ. ಎರಡೆರಡು ಕಾರ್ಡು ಹೊಂದಿರುವವರಿಗೆ ಕಾರ್ಡು ಕೊಡಿ ಎಂದು ನಾವು ಕೇಳುತ್ತಿಲ್ಲ. ನಿಜವಾದ ಕಾರ್ಡುದಾರರಿಗೆ ಕೊಡುವುದಕ್ಕೆ ನಿರ್ದಿಷ್ಟವಾಗಿ 15

ದಿವಸ, ಒಂದು ತಿಂಗಳು ಅಥವಾ ಎರಡು ತಿಂಗಳು ತೆಗೆದುಕೊಳ್ಳುತ್ತೀರಿ ಎಂಬುದನ್ನು ಸಭೆಗೆ ತಿಳಿಸಬೇಕೆಂದು ಮಾನ್ಯ ಆಹಾರ ಮತ್ತು ನಾಗರಿಕ ಪೂರೈಕೆ ಸಚಿವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಪಿ. ಕುಮಾರಸ್ವಾಮಿ : ಆ ಮೇಲೆ ಗುರುತು ಕೊಡುವುದು, ಮನೆಯೇ ಕೊಟ್ಟಿಲ್ಲ, ಗುರುತು ಕೊಡಿ ಎಂದರೆ ಹೇಗೆ?

ಅಧ್ಯಕ್ಷರು : ದಯವಿಟ್ಟು ಕುಳಿತುಕೊಳ್ಳಿ. ಅವರು ಮಾತನಾಡುತ್ತಿದ್ದಾರೆ ನೀವು ಮಧ್ಯೆ ಎದ್ದು ಮಾತನಾಡುತ್ತೀರಿ.

ಶ್ರೀ ಯು.ಟಿ.ಖಾದರ್ : ಸರ್ಕಾರ ಮಾಡಿದ ಕಾನೂನಿಂದ ಬಡವರಿಗೆ ಅನುಕೂಲವಾಗಬೇಕು.

ಶ್ರೀ ಎಂ.ಪಿ. ಕುಮಾರಸ್ವಾಮಿ : ಮನೆ ಗುರುತು ಕೊಡಿ ಎಂದು ಹೇಳುತ್ತಾರೆ. ಮನೆಯೇ ಇಲ್ಲದೆ ಮೋರಿಯ ಮೇಲೆ ವಾಸಿಸುತ್ತಿರುತ್ತಾರೆ. ಅವರು ಎಲ್ಲಿಂದ ಮನೆ ಗುರುತು ಕೊಡುವುದು?

ಕುಮಾರಿ ಶೋಭ ಕರಂದ್ಲಾಜೆ : ಮಾನ್ಯ ಅಧ್ಯಕ್ಷರೆ, ಮಾನ್ಯ ರೇವಣ್ಣರವರು ಕೂಡ ಈ ವಿಚಾರವನ್ನು ಪ್ರಸ್ತಾಪ ಮಾಡಿದರು, ಅವರಿಗೂ ಗೊತ್ತಿದೆ, ಈಗಾಗಲೇ ಗ್ರಾಮಪಂಚಾಯಿತಿಗಳಲ್ಲಿ ಆನ್‌ಲೈನ್ ಮುಖಾಂತರ ರೇಷನ್ ಕಾರ್ಡ್ ಕೊಡುವ ಪ್ರಕ್ರಿಯೆ ಕಳೆದ 15 ದಿವಸಗಳಿಂದ ಪ್ರಾರಂಭ ವಾಗಿದೆ. ನಗರ ಪ್ರದೇಶಗಳಲ್ಲಿಯೂ ಪ್ರಾರಂಭವಾಗಿದೆ. ಯಾರಿಗೆ ರೇಷನ್ ಕಾರ್ಡ್ ಇಲ್ಲ ಅವರು ಆಯಾ ಗ್ರಾಮ ಪಂಚಾಯಿತಿಗೆ ನಗರ ಪ್ರದೇಶಗಳಲ್ಲಿ ನಮ್ಮ ಕಚೇರಿಗೆ ಅಥವಾ ತಾಲ್ಲೂಕು ಆಫೀಸಿಗೆ ಹೋಗಿ ಎಂಟ್ರೀ ಮಾಡಿಸಬೇಕು. ಮಾನ್ಯ ಶಾಸಕರೂ ಕೂಡ ಅವರವರ ಕ್ಷೇತ್ರಗಳಲ್ಲಿ ಬೆಳಕನ್ನು ಚೆಲ್ಲಬೇಕು. ಈಗಾಗಲೇ ನಾನು ಎಲ್ಲರಿಗೂ ಪತ್ರವನ್ನು ಬರೆದಿದ್ದೇನೆ.

ಅಧ್ಯಕ್ಷರು : ಶ್ರೀಮತಿ ಅನಿತಾ ಕುಮಾರಸ್ವಾಮಿಯವರ ಪರವಾಗಿ ಮಾನ್ಯ ಸುರೇಶ್‌ಬಾಬುರವರು ಕೇಳಿ.

ಶ್ರೀ ಸುರೇಶ್ ಬಾಬು : ಮಾನ್ಯ ಅಧ್ಯಕ್ಷರೆ, ಕೊನೆಗೆ ತೆಗೆದುಕೊಳ್ಳಿ ಅವರೇ ಬರುತ್ತಿದ್ದಾರೆ. ಅವರು ಮಾತನಾಡಬೇಕೆಂದು ಇಚ್ಛೆ ಪಡುತ್ತಿರುವು ದರಿಂದ ಈ ಪ್ರಶ್ನೆಯನ್ನು ಕೊನೆಗೆ ತೆಗೆದುಕೊಳ್ಳಿ.

ಅಧ್ಯಕ್ಷರು : ಅಮರೇಗೌಡ ಬಯ್ಯಾಪೂರ್‌ರವರ ಪರವಾಗಿ ಶ್ರೀ ಹೆಚ್.ಎಸ್.ಮಹದೇವ ಪ್ರಸಾದ್ ತಾವು ಕೇಳಿ.